ರಾಜ್ಯದಲ್ಲಿ ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳನ್ನು ರಫ್ತು ಮಾಡುವ ಬಗ್ಗೆ

3166 (3951) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಕೃಷಿ ಉತ್ಪನ್ನ ಸಂಸ್ಕರಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಕೃಷಿ ಮತ್ತು ತೋಟಗಾರಿಕಾ ಇಲಾಖೆಯಲ್ಲಿ ಯಾವ ಯಾವ ಉತ್ಪನ್ನಗಳನ್ನು ಸಂಸ್ಕರಣ ಮಾಡಲು ಅವಕಾಶವಿದೆ; ಈಗಾಗಲೇ ಯಾವ ಸಂಸ್ಕರಣ ಘಟಕಗಳು ಯಾವ ಯಾವ ಉತ್ಪನ್ನಗಳನ್ನು ಉತ್ಪಾದಿಸುತ್ತಿರುವುದು; ವಿವರ ನೀಡುವುದೆ;

ಆ) ರಾಜ್ಯದಿಂದ ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ಯಾವ ಉತ್ಪನ್ನಗಳನ್ನು ಹೊರ ದೇಶಗಳಿಗೆ ರವಾನಿಸಲು ಅವಕಾಶವಿದೆ; ಯಾವ ದೇಶಗಳಿಗೆ ರಫ್ತು ಮಾಡುತ್ತಿರುವ ವಿವರವಾದ ಮಾಹಿತಿ ನೀಡುವುದು;

ಇ) ರಾಜ್ಯದ ಹೊಸ ಸಂಸ್ಕರಣ ಘಟಕಗಳು ಹಾಗೂ ಸಂಸ್ಥೆಗಳನ್ನು ಪ್ರಾರಂಭಿಸಲು ಯಾವ ಸವಲತ್ತುಗಳನ್ನು ಸರ್ಕಾರ ನೀಡುತ್ತಿದೆ; ವಿವರ ನೀಡುವುದು;

ಈ) ಸಹಕಾರಿ ರೈತರ ಉತ್ಪಾದಕ ಸಂಸ್ಕರಣ ಘಟಕಗಳು ಪ್ರಾರಂಭಿಸಲು ಯಾವ ಹೆಚ್ಚಿನ ಸಹಾಯ ಸೌಲಭ್ಯಗಳನ್ನು ನೀಡಲಾಗುತ್ತಿದೆ?

ಶ್ರೀ ಜಿ. ರಾಜುಗೌಡ (ಕೃಷಿ ಉತ್ಪನ್ನ ಸಂಸ್ಕರಣ ರಾಜ್ಯ ಸಚಿವರು):

ಅ) ರಾಜ್ಯದಲ್ಲಿ ಸಂಸ್ಕರಣಾ ಘಟಕಗಳು ಪ್ರಧಾನವಾಗಿ ಖಾಸಗಿ ಕ್ಷೇತ್ರದಲ್ಲಿದ್ದು ಕೆಲವು ಸರಕಾರಿ ಹಾಗೂ ಸಹಕಾರಿ ಕ್ಷೇತ್ರದಲ್ಲಿ ಇರುತ್ತವೆ. ಅವುಗಳ ವಿವರ ಕೆಳಕಂಡಂತಿದೆ:–

1) ಅಕ್ಕಿ, ಬೇಳೆ ಮತ್ತು ಇತರೇ ದವಸ ಧಾನ್ಯಗಳ ಸಂಸ್ಕರಣಾ ಗಿರಣಿಗಳು.

2) ಎಣ್ಣೆಬೀಜ ಮತ್ತು ಇತರೆ ಎಣ್ಣೆ ಕಾಳುಗಳ ಸಂಸ್ಕರಣಾ ಘಟಕಗಳು.

3) ಸಕ್ಕರೆ ಕಾರ್ಖಾನೆಗಳು.

4) ಹಣ್ಣು ಮತ್ತು ತರಕಾರಿ ಸಂಸ್ಕರಣಾ ಘಟಕಗಳು.

5) ಸಾಂಬಾರು ಪದಾರ್ಥಗಳ ಸಂಸ್ಕರಣಾ ಘಟಕಗಳು.

ಆ) ರಾಜ್ಯದಲ್ಲಿ ಉತ್ತಮ ಭೂಮಿ ಹಾಗೂ ಹವಾಗುಣವಿರುವುದರಿಂದ ಹಣ್ಣಿನ ಬೆಳೆಗಳಾದ ಬಾಳೆ, ದ್ರಾಕ್ಷಿ, ದಾಳಿಂಬೆ, ಲಿಂಬೆ, ಮಾವು, ಸೀಬೆ ಪಪಾಯಿ ಮತ್ತು ಕದಂಬ ಹಣ್ಣುಗಳನ್ನು (Passion Fruits) ಬೆಳೆಯಲು ವಿಫುಲ ಅವಕಾಶಗಳಿವೆ. ಬೆಂಗಳೂರು ಗುಲಾಬಿ ಈರುಳ್ಳಿ, ಮಿಡಿಸೌತೆಕಾಯಿ, ಮೆಣಸಿನಕಾಯಿ, ಆಲೂಗಡ್ಡೆ, ಅಕ್ಕಿ, ಬೇಳೆಕಾಳುಗಳನ್ನು ಸಹ ಬೆಳೆಯಲಾಗುತ್ತಿದೆ. ಈ ಎಲ್ಲಾ ಬೆಳೆಗಳಿಗೆ ವಿದೇಶದಲ್ಲಿ ಉತ್ತಮ ಬೇಡಿಕೆಯಿದೆ.

ಇ) ಹೊಸ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ಈ ಕೆಳಕಂಡ ಸವಲತ್ತುಗಳನ್ನು ಸರ್ಕಾರದಿಂದ ನೀತಿಯಂತೆ ನೀಡಲಾಗುತ್ತದೆ.

ಎ) ಕಾರ್ಮಿಕ ನಿಯಮದಡಿ ಕೃಷಿ ಆಹಾರ ಸಂಸ್ಕರಣಾ ಘಟಕವನ್ನು ಒಂದು "ನಿಯಮಕಾಲಿಕ ಕೈಗಾರಿಕೆ "ಯೆಂದು ನಿರ್ಧರಿಸಲಾಗಿದೆ. ಕನಿಷ್ಟ ವಿದ್ಯುತ್ ಭತ್ಯೆಯನ್ನು ಸಹ 90 ದಿನಗಳೊಳಗಾಗಿ ಮುಚ್ಚುವಂತಹ ಕೈಗಾರಿಕೆಗಳಿಗೆ ಮನ್ನಾ ಮಾಡಲಾಗಿದೆ.

ಬಿ) ವಿದ್ಯುತ್ ಕರ ಸಹ ಶೇ.100 ರಷ್ಟು ರಿಯಾಯಿತಿ ನೀಡಿದೆ ಹಾಗೂ ಮಾರಾಟದರಕ್ಕೂ ಸಹ ಶೇ.4 ರಷ್ಟು ದ್ರವರೂಪದ ಇಂಧನಕ್ಕೂ ಸಹ ಬೆಂಗಳೂರು ನಗರ ಮತ್ತು (ಗ್ರಾಮಾಂತರ) ಜಿಲ್ಲೆಗಳನ್ನು ಹೊರತುಪಡಿಸಿ ನೀಡಲಾಗುತ್ತದೆ.

ಸಿ) ಅಂತಹ ಕೃಷಿ ಆಹಾರ ಸಂಸ್ಕರಣಾ ಘಟಕಗಳು ನೇರವಾಗಿ ರೈತರಿಂದ ಹಣ್ಣು ಮತ್ತು ತರಕಾರಿಗಳನ್ನು ಒಪ್ಪಂದ ಮೇಲೆ ಖರೀದಿಸುವಲ್ಲಿ, ಎ.ಪಿ.ಎಂ.ಸಿ. ನಿಯಮಗದಡಿ ನೀಡಬೇಕಾದ ಮಾರುಕಟ್ಟೆ ಕರ:ಶುಲ್ಕಕ್ಕೂ ಸಹ ನೀಡಬೇಕಾಗುವುದಿಲ್ಲ.

ಡಿ) ಕೈಗಾರಿಕಾ ಘಟಕಗಳನ್ನು ಸ್ಥಾಪಿಸುವ ಸಲುವಾಗಿ ಕೊಳ್ಳುವ ಕೃಷಿ ಜಮೀನಿಗೆ ಮಾರ್ಪಾಡು ಶುಲ್ಕವನ್ನು ನೀಡಬೇಕಾಗುವುದಿಲ್ಲ. ಆದರೆ, ಅದಕ್ಕೆ ಹೊಂದಿಕೊಂಡಂತಹ ಕೈಗಾಗಿಕೆಗಳಿಗೆ ರಿಯಾಯಿತಿ ನೀಡುವಾಗ ಪ್ರತಿ ಒಂದರಲ್ಲಿ ಅದನ್ನು 100 ಎಕರೆಯೊಳಗಾಗಿರುವಂತಹ ಪ್ರಕರಣಗಳಲ್ಲಿ ಮಾತ್ರ ಅನ್ವಯಿಸುತ್ತದೆ.

ಇ) ಕೃಷಿ ಸಂಸ್ಕರಣಾ ಘಟಕಗಳಿಗೆ ಉತ್ತೇಜನ ನೀಡುವ ಸಲುವಾಗಿ ರಾಷ್ಟ್ರೀಯ:ಅಂತರರಾಷ್ಟ್ರೀಯ ವಸ್ತು ಪ್ರದರ್ಶನ:ಕಾರ್ಯಾಗಾರದಲ್ಲಿ ಭಾಗವಹಿಸಲು ಸರ್ಕಾರದಿಂದ ಪ್ರೋತ್ಸಾಹ ಭತ್ಯೆ ಯೋಜನೆಯನ್ನು ಪ್ರತ್ಯೇಕವಾಗಿ ತಯಾರಿಸಲಾಗುವುದು.

ಎಫ್) ಹೊಸ ಕೈಗಾರಿಕಾ ನೀತಿಯಲ್ಲಿ ಲಭ್ಯವಿರುವ ಪ್ರೋತ್ಸಾಹಕ ಭತ್ಯೆಯನ್ನು ಕೃಷಿ ಉತ್ಪನ್ನ ಸಂಸ್ಕರಣಾ ಘಟಕಗಳಿಗೂ ಸಹ ನೀಡಲಾಗುವುದು.

ಜಿ) ಸರ್ಕಾರಿ ಆದೇಶ ಸಂ:ಸಿಐ 167 ಎಸ್‌ಪಿಐ 2001, ದಿನಾಂಕ:20–6–2001 ರಂತೆ ಅನುಬಂಧದಲ್ಲಿ ವಿವರಿಸಿರುವ ಕೈಗಾರಿಕೆ ಉದ್ದಿಮೆಗಳಿಗೆ ಪ್ರೋತ್ಸಾಹಕ ಭತ್ಯ ನೀಡಲಾಗುತ್ತದೆ.

ಹೆಚ್) ತಾಂತ್ರಿಕ ವರ್ಗಾವಣೆ ವೆಚ್ಚವನ್ನು ಮತ್ತು ಸಮಾಲೋಚನಾ ಶುಲ್ಕವನ್ನು ಗರಿಷ್ಠ 25,000–00ಕ್ಕೆ ಒಳಪಟ್ಟು ಮರುಪಾವತಿ ಮಾಡಲಾಗುತ್ತದೆ.

ಈ) 'ಇ' ಯಲ್ಲಿ ನೀಡಿರುವಂತೆ.

ಕೃಷಿ ಇಲಾಖೆಗೆ ಕೇಂದ್ರ ಸರ್ಕಾರದ ಅನುದಾನ

3207 (3716) : ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೃಷಿ ಇಲಾಖೆಯ ಅನೇಕ ಯೋಜನೆಗಳಿಗೆ ಕೇಂದ್ರ ಸರ್ಕಾರ ನೀಡುತ್ತಿರುವ ಸಹಾಯಧನ ಎಷ್ಟು: ಯಂತ್ರೋಪಕರಣಗಳು, ಇತ್ಯಾದಿ ವಿವರ ಕೊಡುವುದು;

ಆ) ಇದರ ಜೊತೆಗೆ ರಾಜ್ಯ ಸರ್ಕಾರ ಕೃಷಿ ಒತ್ತುಕೊಟ್ಟು ಎಷ್ಟು ಸಹಾಯಧನವನ್ನು ನೀಡಲಾಗಿದೆ: ವಿವರ ಕೊಡುವುದು;

ಇ) ಕೇಂದ್ರ ಸರ್ಕಾರ ನೀಡುತ್ತಿರುವ ಸಹಾಯಧನವನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳಲಾಗಿದೆಯೇ;

ಈ) ಎಲ್ಲಾ ಸಹಾಯಧನವನ್ನು ರೈತರು ಪೂರ್ಣವಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆಯೇ? (ಜಿಲ್ಲಾವಾರು ಮಾಹಿತಿ ನೀಕೊಡುವುದು)

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು):

ಅ) 2003–04ನೇ ವರ್ಷಕ್ಕೆ ಕೃಷಿ ಇಲಾಖೆಯ ವಿವಿಧ ಯೋಜನೆಗಳಿಗಾಗಿ ಕೇಂದ್ರ ಸರ್ಕಾರವು ರೂ.2770.48 ಲಕ್ಷ ಅನುದಾನವನ್ನು ನೀಡುತ್ತಿದೆ. ಆ ಪೈಕಿ ಯಾಂತ್ರೀಕರಣ ಕಾರ್ಯಕ್ರಮಕ್ಕಾಗಿ ರೂ.313.00 ಲಕ್ಷಗಳನ್ನು ನಿಗದಿಪಡಿಸಲಾಗಿದೆ. ಯೋಜನೆವಾರು ವಿವರಗಳನ್ನು ಅನುಬಂಧ–1ರಲ್ಲಿ ಒದಸಿದೆ.